**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 90/2020**

**ಚಾ.ಸಾಃ1, ಫ್ರಾ.ಸಾಃ1**

| | |
|---|---|
| ಸಾಕ್ಷಿದಾರನ ಹೆಸರು | ಬಾಲಚಂದ್ರ ಹೆಗಡೆ |
| ತಂದೆಯ ಹೆಸರು | ಗಣಪತಿ ಹೆಗಡೆ |
| ವಯಸ್ಸು | 61 ವರ್ಷಗಳು |
| ಉದ್ಯೋಗ | ಕೃಷಿ |
| ವಾಸ್ತವ್ಯ | ಹೆಬ್ಬಾರ್ನಕೇರಿ, ಕಡ್ಲೆ ಅಂಚೆ, ತಾಃ ಹೊನ್ನಾವರ |

**ಸಾಕ್ಷಿಯನ್ನು ದಿನಾಂಕಃ 09-06-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ದಿನಾಂಕ 20-06-2019ರಂದು ನನ್ನ ಹೆಂಡತಿಯಾದ ಚಂದ್ರಕಲಾ ಹೆಗಡೆಯವರು ಅನಾರೋಗ್ಯದಿಂದ ಬಳಲುತ್ತಿದ್ದರಿಂದ ನಾನು ಮತ್ತು ಆಕೆ ಮಣಿಪಾಲದ ಕಸ್ತುರಬಾ ಆಸ್ಪತ್ರೆಗೆ ಹೋಗಿದ್ದರು. ನನ್ನ ಮಕ್ಕಳಾದ ಚಾಸಾ-9 ದಿವ್ಯಾ ಹೆಗಡೆ ಮತ್ತು ಚಾಸಾ-10 ಅಶ್ವಿನಿ ಹೆಗಡೆಯವರು ಸಾಯಂಕಾಲ 06-00ರ ಸಮಯಕ್ಕೆ ಮನೆಗೆ ಬೀಗ ಹಾಕಿ ಮಣಿಪಾಲಕ್ಕೆ ಬಂದಿರುತ್ತಾರೆ. ನನ್ನ ಹೆಂಡತಿಗೆ ಶಸ್ತ್ರ ಚಿಕಿತ್ಸೆ ಮಾಡಿಸಿ ಬಿಡುಗಡೆ ಮಾಡಿಕೊಂಡು ದಿನಾಂಕ 23-06-2019ರಂದು ಸಾಯಂಕಾಲ 06-00ರ ಸಮಯಕ್ಕೆ ಹೆಬ್ಬಾರ್ನಕೇರಿಯಲ್ಲಿರುವ ನಮ್ಮ ಮನೆಗೆ ಬಂದು ನೋಡಲಾಗಿ ದೇವರ ಮನೆಯ ಕೋಣೆಯ ಕಿಟಕಿಗೆ ಹಾಕಿದ್ದ ಗ್ರಿಲ್ಸನ್ನು ಮುರಿಯಲಾಗಿತ್ತು. ಅದು ಹೊರಕ್ಕೆ ಬೆಂಡಾಗಿತ್ತು. ನನಗೆ ಗಾಬರಿಯಾಗಿ ಮನೆಯ ಒಳಗೆ ಹೋಗಿ ನೋಡಲಾಗಿ ಎಲ್ಲಾ ವಸ್ತುಗಳು ಚಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೆಡ್ ರೂಮಿನ ಗೋದ್ರೇಜ್ ಕಪಾಟು ತೆರೆದಿದ್ದು ಅದರ ಒಳಗಿದ್ದ ಬಟ್ಟೆಗಳು ಚಲ್ಲಾಪಿಲ್ಲಿಯಾಗಿದ್ದವು ಮತ್ತು ಲಾಕರ್ ತೆರೆದಿತ್ತು. ಲಾಕರನಲ್ಲಿಟ್ಟಿದ್ದ ಅಜಮಾಸ್ ಮೂರುವರೆ ತೊಲೆ ತೂಕದ ಒಂದು ಬಂಗಾರದ ಮಂಗಳಸೂತ್ರ, ತಲಾ ಸುಮಾರು ಒಂದುವರೆ ತೊಲೆ ತೂಕದ 2 ಬಂಗಾರದ ಬಳೆಗಳು, ತಲಾ 9 ಗ್ರಾಂ ತೂಕದ 2 ಪವನ್ ಗಳು, ಅಜಮಾಸ್ 6 ಗ್ರಾಂ ತೂಕದ ಒಂದು ಜೊತೆ ಕಿವಿಯೋಲೆಯನ್ನು ಕಳ್ಳತನ ಮಾಡಲಾಗಿತ್ತು. ಮಾಹಿತಿಯನ್ನು ಪೋಲಿಸರಿಗೆ ತಿಳಿಸಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 23-062019ರಂದು ಸಾಯಂಕಾಲ 06-00ರ ಸಮಯಕ್ಕೆ ಪಿರ್ಯಾದು ನೀಡಿರುತ್ತೇನೆ. ಅದನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಪಿರ್ಯಾದನ್ನು ಗುರುತಿಸಿದ್ದರಿಂದ ಅದನ್ನು ನಿಪಿ-1 ಮತ್ತು ಅದರ ಮೇಲಿನ ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಅದೇ ದಿನ ಪೋಲಿಸರು ರಾತ್ರಿ 09-00ರ ಸಮಯಕ್ಕೆ ನಮ್ಮ ಮನೆಗೆ ಬಂದಿದ್ದರು. ಕಾರವಾರದಿಂದ ಬೆರಳಚ್ಚುತಜ್ಞರು ಮತ್ತು ಶ್ವಾನದಳ ಬಂದಿತ್ತು. ಪೋಲಿಸರು ಸ್ಥಳದಲ್ಲಿ ಪರಿಶೀಲನೆ ಮಾಡಿ ಪಂಚನಾಮೆ ಮಾಡಿರುತ್ತಾರೆ. ಪೋಲಿಸರಿಗೆ ಸ್ಥಳವನ್ನು ನಾನೇ ತೋರಿಸಿರುತ್ತೇನೆ. ಆ ಸಂದರ್ಭದಲ್ಲಿ

ಸಿಪಿಐ, ಪಿಎಸ್‌ಐ, ಚಾಸಾ-2 ಮತ್ತು 3 ಹಾಜರಿದ್ದರು. ಪೋಲಿಸರು ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿ ಛಾಯಾಚಿತ್ರಗಳನ್ನು ತೆಗೆಸಿರುತ್ತಾರೆ. ಸದರಿ ಪಂಚನಾಮೆ ಮತ್ತು ನಕಾಶೆಗೆ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಅವುಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ನಿಪಿ-2 ಮತ್ತು 3 ಹಾಗೂ ಅವುಗಳ ಮೇಲಿನ ಸಾಕ್ಷಿ ಸಹಿಗಳನ್ನು ನಿಪಿ-2(ಎ) ಮತ್ತು 3(ಎ) ಎಂದು ಗುರುತಿಸಲಾಯಿತು. ಪಂಚನಾಮೆ ಸಮಯದಲ್ಲಿ ತೆಗೆದ ಛಾಯಾಚಿತ್ರಗಳನ್ನು ಸಾಕ್ಷಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ-4 ಮತ್ತು ನಿಪಿ-5 ಎಂದು ಗುರುತಿಸಲಾಯಿತು.

ದಿನಾಂಕ 04-08-2020ರಂದು ಪೋಲಿಸರು ನಮ್ಮ ಮನೆಗೆ ಇಬ್ಬರು ವ್ಯಕ್ತಿಗಳನ್ನು ಕರೆತಂದಿದ್ದರು. ಅವರ ಹೆಸರು ಸಜ್ಜದ್ ಅಹ್ಮದ್ ಗಣಿ ಮತ್ತು ಮುಬಾಸಿರ್ ಗಣಿ. ಸದರಿ ವ್ಯಕ್ತಿಗಳನ್ನು ತೋರಿಸಿ ಇವೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುವ ಆರೋಪಿಗಳು ಎಂದು ಪೋಲಿಸರು ತಿಳಿಸಿರುತ್ತಾರೆ. ನಾವು ಸದರಿ ವ್ಯಕ್ತಿಗಳನ್ನು ವಿಚಾರಣೆ ಮಾಡಲಾಗಿ ಅವರು ಜೂನ್ ತಿಂಗಳ 22-23ರ ಮಧ್ಯರಾತ್ರಿ 01-00 ರಿಂದ 03-00ರ ಅವಧಿಯಲ್ಲಿ ಬಲವಾದ ರಾಡನಿಂದ ಕಿಟಕಿಯನ್ನು ಬೆಂಡ್ ಮಾಡಿ ಒಳಗೆ ಹೋಗಿ ಗೋದ್ರೇಜ್ ಕಪಾಟನ್ನು ಒಡೆದು ಅದರಲ್ಲಿಟ್ಟಿದ್ದ ಚಿನ್ನಾಭರಣವನ್ನು ತೆಗೆದುಕೊಂಡು ಹೋಗಿರುವುದಾಗಿ ತಿಳಿಸಿರುತ್ತಾರೆ.

ದಿನಾಂಕ 05-08-2020ರಂದು ಪೋಲಿಸರು ಠಾಣೆಗೆ ಬರಲು ಹೇಳಿದ್ದು ವಸೂಲಾದ ಚಿನ್ನಾಭರಣಗಳನ್ನು ನಮಗೆ ತೋರಿಸಿರುತ್ತಾರೆ. ನಾವು ನಮ್ಮ ಆಭರಣಗಳನ್ನು ಗುರುತಿಸಿರುತ್ತೇವೆ. ಠಾಣೆಯಲ್ಲಿ ಒಂದು ಮಂಗಳಸೂತ್ರ, 2 ಪವನ್ ಮತ್ತು ಒಂದು ಜೊತೆ ಕಿವಿಯೋಲೆಯನ್ನು ತೋರಿಸಿರುತ್ತಾರೆ. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಸದರಿ ವಸ್ತುಗಳನ್ನು ತನಿಖಾಧಿಕಾರಿ ಹಾಜರು ಮಾಡಿದ್ದು, ಸಾಕ್ಷಿ ಅವುಗಳನ್ನು ಗುರುತಿಸಿದ್ದರಿಂದ ಮಂಗಳಸೂತ್ರವನ್ನು ಮುಮಾ-1, 2 ಪವನಗಳನ್ನು ಮುಮಾ-2 ಮತ್ತು 3 ಮತ್ತು ಒಂದು ಜೊತೆ ಕಿವಿಯೋಲೆಯನ್ನು ಮುಮಾ-4 ಎಂದು ಗುರುತಿಸಲಾಯಿತು.

ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಮರುಹೇಳಿಕೆ ಪಡೆದಿರುತ್ತಾರೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನನ್ನ ಮನೆಯ ಅಕ್ಕಪಕ್ಕ ಹಲವಾರು ಮನೆಗಳಿವೆ ಎಂದರೆ ಸರಿ. ನಾನು ನಮ್ಮ ಮನೆಯನ್ನು ನೋಡಿಕೊಳ್ಳುವಂತೆ ಅಕ್ಕಪಕ್ಕದವರಿಗೆ ಹೇಳಿರುವುದಿಲ್ಲ. ಕಳ್ಳತನವಾಗಿರುವುದನ್ನು ನೋಡಿದ ನಂತರ ಅದನ್ನು ನಾನು ಅಕ್ಕಪಕ್ಕದವರಿಗೆ ಹೇಳಿರುವುದಿಲ್ಲ. ಪಿರ್ಯಾದು ನೀಡುವ ಸಂದರ್ಭದಲ್ಲಿ ಆಭರಣಗಳನ್ನು ಖರೀದಿ ಮಾಡಿದ ಬಗ್ಗೆ ನಾನು ಮೂಲ ರಸೀದಿಗಳನ್ನು ನೀಡಿರುವುದಿಲ್ಲ. ಪೋಲಿಸರು ನಕಲನ್ನು ತೆಗೆದುಕೊಂಡು ಹೋಗಿರುತ್ತಾರೆ. ಕರಿಮಣಿ, ಬಳೆಗಳು ಮತ್ತು ಕಿವಿಯೋಲೆಗಳ ರಸೀದಿಗಳನ್ನು ಮಾತ್ರ

ನೀಡಿದ್ದು ಉಳಿದ ಆಭರಣಗಳು ಹಳೆಯ ಆಭರಣಗಳಾದ್ದರಿಂದ ರಸೀದಿ ಇರಲಿಲ್ಲ. ಚಾಸಾ-2 ನಮ್ಮ ಮನೆಯ ಪಕ್ಕದಲ್ಲಿ ವಾಸವಾಗಿರುತ್ತಾರೆ. ಚಾಸಾ-3 ದೂರದವರು. ನಾವು ಗಾಬರಿಯಿಂದ ಕೂಗಿದ್ದರಿಂದ ಚಾಸಾ-2 ಮತ್ತು 3 ಸ್ಥಳಕ್ಕೆ ಬಂದಿರುತ್ತಾರೆ. ಪೋಲಿಸರು ಮನೆಯಲ್ಲಿದ್ದ ಎಲ್ಲಾ ಕೋಣೆಗಳನ್ನು ತಪಾಸಣೆ ಮಾಡಿರುತ್ತಾರೆ. ಪಂಚನಾಮೆಯನ್ನು ನನ್ನ ಹೇಳಿಕೆ ಪ್ರಕಾರ ಬರೆದಿರುತ್ತಾರೆ.

ದಿನಾಂಕ 05-08-2020 ರಂದು ಪೋಲಿಸರು ಜಪ್ತು ಮಾಡಿದ್ದ ಆಭರಣಗಳನ್ನು ನಮ್ಮ ಮನೆಯ ಬಳಿ ತಂದು ತೋರಿಸಿರುತ್ತಾರೆ. ಮುಮಾ-1 ರಿಂದ 4 ನ್ನು ನನ್ನ ಹೆಂಡತಿ ಧರಿಸುತ್ತಿದ್ದಳು. ಪೋಲಿಸರು ಸದರಿ ಆಭರಣಗಳ ಬಗ್ಗೆ ನನ್ನ ಹೆಂಡತಿಗೆ ತೋರಿಸಿ ವಿಚಾರಣೆ ಮಾಡಿರುತ್ತಾರೆ. ಆಭರಣಗಳನ್ನು ಪೋಲಿಸರು ನನಗೆ ತೋರಿಸಿ ಇವುಗಳು ಸಿಕ್ಕಿವೆ ಎನ್ನುವುದನ್ನು ಬಿಟ್ಟು ಬೇರೆ ಏನನ್ನೂ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ನನ್ನ ಮುಂದೆ ಆಭರಣಗಳನ್ನು ನನ್ನ ಮನೆಯಲ್ಲಿ ಕಳ್ಳತನ ಮಾಡಿದ್ದೇವೆ ಎಂದು ಹೇಳಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಕಳ್ಳತನ ಆಗಿಲ್ಲ ಎಂದರೆ ಸರಿಯಲ್ಲ. ನಮ್ಮ ಮನೆಯಲ್ಲಿ ಕಳ್ಳತನವಾಗಿರುವ ಆಭರಣಗಳಿಗೆ ಮತ್ತು ಆರೋಪಿಗಳಿಗೆ ಹಾಗೂ ಈ ನ್ಯಾಯಾಲಯದ ಮುಂದಿರುವ ಆಭರಣಗಳಿಗೆ ಹಾಗೂ ಆರೋಪಿಗಳಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**